**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ10042/2021**

ಪಿಡಬ್ಲ್ಯೂ- 5
ಸಿಡಬ್ಲ್ಯೂ- 6

ಸಾಕ್ಷಿ ಹೆಸರು - ಮಂಜಪ್ಪಗೌಡ
ತಂದೆ ಹೆಸರು - ನಿಂಗಪ್ಪಗೌಡ
ವಯಸ್ಸು - 42 ವರ್ಷ
ಉದ್ಯೋಗ - ವ್ಯವಸಾಯ
ವಾಸಃ - ಕಚವಿ ಗ್ರಾಮ, ಸೊರಬ ತಾಲ್ಲೂಕು.

**ಪ್ರಮಾಣ ವಚನ ಭೋದಿಸಿದ ದಿನಾಂಕಃ 22-08-2024**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ಆರೋಪಿ ಗೊತ್ತು. ನನಗೆ ಪ್ರಾ ಸಾ 1 ಮತ್ತು ಪ್ರಾ ಸಾ -2 ಗೊತ್ತು. ಪ್ರಾ ಸಾ -4, ಚಾಸಾ7 ರಿಂದ ಚಾಸಾ13 ರವರ ಪರಿಚಯ ಇದೆ. ಪ್ರಾ ಸಾ -1 ರವರಿಗೆ ನಮ್ಮ ಊರಿನಲ್ಲಿ ಅಡಿಕೆ ತೋಟ ಇರುತ್ತದೆ. ಪ್ರಾ ಸಾ 2 ಮತ್ತು ಆರೋಪಿಯ ಮದ್ಯೆ ಯಾವ ವಿಚಾರದಲ್ಲಿ ವೈಮನಸ್ಸು ಇದೆ ಎಂದು ನನಗೆ ಗೊತ್ತಿಲ್ಲ. ಪ್ರಾ ಸಾ -1 ರವರ ಜಮೀನಿಗೆ ನಾನು ಯಾವತ್ತೂ ಕೆಲಸಕ್ಕೆ ಹೋಗಿಲ್ಲ. ಪ್ರಾ ಸಾ -2 ಮತ್ತು ಆರೋಪಿಯ ನಡುವೆ ಗಲಾಟೆ ಆದ ಸಮಯದಲ್ಲಿ ನಾನು ಇರಲಿಲ್ಲ, ಹಾಗಾಗಿ ಆರೋಪಿ ಮತ್ತು ಪ್ರಾ ಸಾ -2 ರವರ ಮದ್ಯೆ ಗಲಟೆ ಆದ ಬಗ್ಗೆ ನನಗೆ ಗೊತ್ತಿಲ್ಲ , ಮರುದಿನ ಗೊತ್ತಾಗಿರುತ್ತದೆ. ಆರೋಪಿ ಪ್ರಾಸಾ-2 ರವರ ತಲೆಗೆ ಹೊಡೆದಿದ್ದಾರೆ ಎಂದು ಗೊತ್ತಾಯಿತು. ಪ್ರಾ ಸಾ -2 ರವರನ್ನು ಯಾವ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದು ಗೊತ್ತಿಲ್ಲ. ಗಲಾಟೆ ನಡೆಯುವಾಗ ಪ್ರಾ ಸಾ 1 ರವರ ಜಮೀನಿಗೆ ಕೆಲಸಕ್ಕೆ ಹೋಗಿದ್ದೆ ಗಲಾಟೆ ನೋಡಿದ್ದೇನೆ ಎಂದು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ಪೋಲೀಸರು ಮಹಜರ್ ಗೆ ಸಹಿ ಮಾಡು ಎಂದು ಹೇಳಿದಕ್ಕರಿಂದ ನಾನು ಮಹಜರ್ ಗೆ ಸಹಿ ಮಾಡಿರುತ್ತೇನೆ. ಮು ಮಾ - 1 ನ್ನು ನಾನು ನೋಡಲಿಲ್ಲ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

ಪ್ರಾ ಸಾ -2 ರವರು ಆರೋಪಿಯ ಜಮೀನಿನಲ್ಲಿ ಓಡಾಡುವ ವಿಚಾರಕ್ಕೆ ತಕರಾರು ಮಾಡಿಕೊಳ್ಳುತ್ತಾ ಒಬ್ಬರಿಗೊಬ್ಬರು ದ್ವೇಷ ಸಾಧಿಸುತ್ತಾ ಜಮೀನಿನ ವಿಚಾರದಲ್ಲಿ ವೈಮನಸ್ಸು ಇದ್ದು ಪ್ರಾ ಸಾ -2 ರವರಿಗೆ ಆರೋಪಿ ಬೆದರಿಕೆ ಹಾಕುತ್ತಿದ್ದ ಎಂದರೆ ಸರಿಯಲ್ಲ. ಘಟನೆ ದಿನ ನಾನು ಹಾಗೂ ಪ್ರಾ ಸಾ4 ರವರು , ಚಾಸಾ-5 ರವರು , ಚಾಸಾ9 ರಿಂದ ಚಾಸಾ12 ರವರು ಪ್ರಾ ಸಾ -1 ರವರ ಸ.ನಂಃ 6 ರಲ್ಲಿ ಮೆಕ್ಕೆ ಜೋಳ ಮುರಿದಿದ್ದು ಅದನ್ನು ಟ್ರಾಕ್ಟರ್ ಗೆ ಹೇರಲು ಕೂಲಿ ಕೆಲಸಕ್ಕೆ ಹೋಗಿದ್ದೆ ಎಂದರೆ ಸರಿಯಲ್ಲ.

ಮದ್ಯಾಹ್ನ 3 ಗಂಟೆಗೆ ಟ್ರಾಕ್ಟರ್ ಗೆ ಲೋಡ್ ಮಾಡಿದ ಮೆಕ್ಕೆ ಜೋಳವನ್ನು ಪ್ರಾ ಸಾ -1 , ಪ್ರಾ ಸಾ -2 , ನಾನು ಮತ್ತು ಚಾಸಾ-13 ರವರು ತೆಗೆದುಕೊಂಡು ಹೋಗುತ್ತಿದ್ದೆವು ಟ್ರಾಕ್ಟರ್ ನ್ನು ಪ್ರಾ ಸಾ 2 ಚಲಾಯಿಸುತ್ತಿದ್ದನು ಎಂದರೆ ಸರಿಯಲ್ಲ. ಆರೋಪಿಯ ಖಾಲಿ ಜಮೀನಿನಲ್ಲಿ ಹೋಗುತ್ತಿದ್ದಾಗ ಆರೋಪಿ ಬಂದು ಪ್ರಾ ಸಾ -2 ರವರ ಟ್ರಾಕ್ಟರ್ ನ್ನು ಅಡ್ಡಗಟ್ಟಿ ನಿಲ್ಲಿಸಿ ಸೂಳೆ ಮಕ್ಕಳಾ ಬೋಳಿ ಮಕ್ಕಳ ಅಂತ ಅವಾಚ್ಯ ಶಬ್ದಗಳಿಂದ ಬೈದನು ಎಂದರೆ ಸರಿಯಲ್ಲ. ಆರೋಪಿ ಏಕಾಏಕಿ ಪ್ರಾ ಸಾ -2 ರವರನ್ನು ಉದ್ದೇಶಿಸಿ ನಿನ್ನನ್ನು ಸಾಯಿಸಿಬಿಡುತ್ತೇನೆ ಎಂದು ಸಾಯಿಸುವ ಉದ್ದೇಶದಿಂದ ಮು ಮಾ 1 ರಿಂದ ಪ್ರಾ ಸಾ -2 ರವರ ತಲೆಗೆ ಹೊಡೆದಿದ್ದು ಆಗ ಪ್ರಾ ಸಾ 2 ಪ್ರಜ್ಞೆ ತಪ್ಪಿ ಬಿದ್ದನು ಎಂದರೆ ಸರಿಯಲ್ಲ. ಅಷ್ಟರಲ್ಲಿ ಟ್ರಾಕ್ಟರ್ ಮೇಲೆ ಇದ್ದ ಪ್ರಾ ಸಾ -1 , ಪ್ರಾ ಸಾ -4 ಮತ್ತು ಚಾಸಾ13 ರವರು ಟ್ರಾಕ್ಟರ್ ನಿಂದ ಇಳಿಯುತ್ತಿದ್ದಂತೆ ಆರೋಪಿ ಕೈಯ್ಯಲ್ಲಿದ್ದ ಮು ಮಾ -1 ನ್ನು ಬಿಸಾಡಿ ಓಡಿ ಹೋಗಿರುತ್ತಾನೆ ಎಂದರೆ ಸರಿಯಲ್ಲ.

ಘಟನೆಯನ್ನು ನೋಡಿದಂತಹ ನಾನು, ಪ್ರಾ ಸಾ -1 , ಪ್ರಾಸಾ -4 ಚಾಸಾ 9 ರಿಂದ ಚಾಸಾ-13 ರವರು ಪ್ರಾ ಸಾ 2 ರವರನ್ನು ನೋಡಿದಾಗ ಅವರ ತಲೆಗೆ ಪೆಟ್ಟಾಗಿ ಬಾವು ಬಂದಿದ್ದು ಆತ ಪ್ರಜ್ಞೆ ತಪ್ಪಿದ್ದ ಎಂದರೆ ಸರಿಯಲ್ಲ. ಪ್ರಾ ಸಾ -2 ರವರನ್ನು ಪ್ರಾ ಸಾ -1 ಮತ್ತು ಚಾಸಾ 13 ರವರು ಸೇರಿ ಅವರಿಗೆ ಸೇರಿದ ಓಮಿನಿ ವಾಹನದಲ್ಲಿ ಆನವಟ್ಟಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ.ಗಲಾಟೆ ನೋಡಿದ್ದೇನೆ ಎಂದು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ -8 ಎಂದು ಗುರುತಿಸಲಾಯಿತು.

ಘಟನೆಯನ್ನು ಕಣ್ಣಾರೆ ಕಂಡಿದ್ದರೂ ಸಹ ನಿಪಿ -8 ರಂತೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದರೂ ಸಹ ಆರೋಪಿಯೊಂದಿಗೆ ಶಾಮೀಲಾಗಿ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತನ ಪರ ವಕೀಲರಿಂದಃ</u>

ಪ್ರಾ ಸಾ -1 ರವರು ಘಟನೆಯ ಬಗ್ಗೆ ಮಾರನೇ ದಿನ ನನಗೆ ತಿಳಿಸಿರುತ್ತಾರೆ. ಮರುದಿನ ನಾನು ಜಮೀನಿಗೆ ಹೋದಾಗ ಟ್ರಾಕ್ಟರ್ ಮಗುಚಿ ಬಿದ್ದಿದ್ದ ಬಗ್ಗೆ ನನಗೆ ಹೇಳಿರುತ್ತಾರೆ ಎಂದರೆ ಹೌದು. ಆರೋಪಿ ಮೊದಲಿನಿಂದಲೂ ಕಾಲು ಕುಂಟುತ್ತಾನೆ ಎಂದರೆ ಹೌದು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).